**Code No. 10 X(A)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2018

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ರಸ್ತೆಯ ಮೇಲೆ ಅಥವಾ ಹಾದಿ ಬೀದಿಗಳಲ್ಲಿ ಜನರು ನಿಧಾನವಾಗಿ ಅಥವಾ ವೇಗವಾಗಿ ನಡೆಯುತ್ತಾರೆ. ಸಾಮಾನ್ಯವಾಗಿ ಶಾಲಾ ಕಾಲೇಜು ಕ್ರೀಡಾಂಗಣದಲ್ಲಿ ವೇಗದ ಓಟದ ಸ್ಪರ್ಧೆಗಳು ನಡೆಯುವುದುಂಟು. ಆಗ ಜನರು ಬಹುಮಾನಕ್ಕಾಗಿ ಧಾವಿಸುತ್ತಾರೆ, ಇಂತಹ ಬಹುಮಾನಗಳ ನಿರೀಕ್ಷೆಯಿಲ್ಲದೆ ಯಾರಾದರೂ ವೇಗದಿಂದ ಹೋಗುತ್ತಿದ್ದಾರೆ ಎಂದಾದರೆ ಏನೋ ವೈಯಕ್ತಿಕವಾದ ಕೆಲಸದ ಕಾರಣಗಳೋ, ತೊಂದರೆಗಳೋ ಇದ್ದಿರಬಹುದು ಎನ್ನಿಸುತ್ತದೆ. ಆದರೆ ಯಾವುದೇ ವೈಯಕ್ತಿಕ ಕಾರಣವಿಲ್ಲದೆ, ಕೇವಲ ಸಾಮಾಜಿಕ ಉದ್ಧಾರಕ್ಕಾಗಿ ವೇಗವಾಗಿ ಧಾವಿಸಿದ ಒಬ್ಬ ಮಹಿಳೆಯು ಜನತೆಗೆ ಮಾರ್ಗದರ್ಶನ ನೀಡಿದ ನಿದರ್ಶನ ಅತ್ಯಂತ ಮನೋಜ್ಞವಾಗಿದೆ. ಒಮ್ಮೆ ಸಾಧ್ವಿ ಮಹಿಳೆ ರಾಬಿಯಾ ಎಂಬಾಕೆ ರಾಜಮಾರ್ಗದಲ್ಲಿ ವೇಗವಾಗಿ ಧಾವಿಸುತ್ತಿದರು. ಅವರ ಒಂದು ಕೈಯಲ್ಲಿ ನೀರು ತುಂಬಿದ ಪಾತ್ರೆಯಿದ್ದರೆ, ಇನ್ನೊಂದು ಕೈಯಲ್ಲಿ ಉರಿಯುತ್ತಿರುವ ಕೊಳ್ಳಿ ಇತ್ತು. ಸಾಮಾನ್ಯವಾಗಿ ಧಾರ್ಮಿಕ ಆಧ್ಯಾತ್ಮಿಕ ಗೂಢ ವಿಚಾರಗಳ ಬಗ್ಗೆ ಉಪದೇಶ ನೀಡುವ ಈ ಮಹಿಳೆ ಗಟ್ಟಿಯಾಗಿ ಹೇಳುತ್ತಾ ಧಾವಿಸುತ್ತಿದ್ದರು. ನಾನು ಸ್ವರ್ಗವನ್ನು ಬೆಂಕಿಯಿಂದ ಸುಟ್ಟು ಬಿಡುತೀನೆ ಮತ್ತು ನರಕವನ್ನು ನೀರಿನಲ್ಲಿ ಮುಳುಗಿಸಿ ಬಿಡುತ್ತೇನೆ, ಈ ಮಾತಿನ ಅರ್ಥ ತಿಳಿಯಲು ಕುತೂಹಲದಿಂದ ಜನರು ಹಿಂಬಾಲಿಸಿದರೂ ಕೇಳುವ ಧೈರ್ಯವಿರಲಿಲ್ಲ.

ಆದರೆ ಹಿರಿಯ ಸನ್ಯಾಸಿ ಒಬ್ಬರು ಧೈರ್ಯ ಮಾಡಿ, ಆ ಮಹಿಳೆಯನ್ನು ತಡೆದು ನೀವೇಕೆ ಹೀಗೆ ಮಾಡಲು ಬಯಸುತ್ತೀರಿ ಎಂದು

[ Turn over

ಪ್ರಶ್ನಿಸಿದರು. ರಾಬಿಯಾ ನೀಡಿದ ಉತ್ತರ ಹೀಗಿತ್ತು. ನಮ್ಮ ಜನರು ನಿಜವಾದ ಅರ್ಥದಲ್ಲಿ ಧಾರ್ಮಿಕ ಪ್ರವೃತ್ತಿಯವರು ಆಗಬೇಕೆಂಬ ಹಂಬಲದಿಂದ ಹೀಗೆ ಮಾಡುತ್ತಿದ್ದೇನೆ. ಜನರು ನಿಜವಾದ ಸಜ್ಜನರಾಗದೆ ಕೇವಲ ಸ್ವರ್ಗದ ದುರಾಸೆಯಿಂದ ಒಳ್ಳೆಯ ಕಾರ್ಯ ಮಾಡುತ್ತಾರೆ. ನರಕ ಭಯದಿಂದ ಕೆಟ್ಟ ಕಾರ್ಯಗಳನ್ನು ಮಾಡುವುದಿಲ್ಲ, ಎಲ್ಲಿ ದುರಾಸೆ ಮತ್ತು ಭಯಗಳಿವೆಯೋ ಅಲ್ಲಿ ನಿಜವಾದ ಈಶ್ವರನ ಪ್ರೇಮವಿರಲಾರದು. ಈ ಸ್ವರ್ಗ ಮತ್ತು ನರಕಗಳೆರಡೂ ಇಲ್ಲವೆಂದರೆ, ಈ ದುರಾಸೆ ಮತ್ತು ಭಯಗಳೂ ನಾಶವಾಗಿ ಬಿಡುವೆವು ಹಾಗು ನಾವು ನಿಜವಾದ ಭಗದ್ಭಕ್ತರಾಗಿ ಬಿಡುವೆವು ಮತ್ತು ಯಾವುದೇ ಮೋಹದ ಆಕರ್ಷಣೆ ಅಥವಾ ಭೀತಿಯ ನಿರಾಕರಣೆ ಇಲ್ಲದೆ ಶುದ್ಧಾ ಅಂತಕರಣದಿಂದ ಪರಮಾತ್ಮನನ್ನು ಆರಾಧಿಸಲು ಸಮರ್ಥರಾಗಬಲ್ಲೇವು.

ವಾಸ್ತವಿಕವಾಗಿ ನಮ್ಮ ಜನಜೀವನವು ಪರಿಶುದ್ಧವಾದ ಅಂತಃಕರಣದಿಂದ ಮೂಡಿಬರುವ ಭಕ್ತಿಗೆ ವಿಶೇಷ ಮೌಲಿಕತೆಯಿದೆ. ಕೇವಲ ಸ್ವರ್ಗ ಸಿಗಲಿ, ಸಂತೋಷ ಸಿಗಲಿ, ಜೀವನದಲ್ಲಿ ಆನಂದವಾದ ವಾತಾವರಣವಿರಲಿ ಎಂಬ ಉದ್ದೇಶದಿಂದ ಮಾಡಲಾಗುವ ಭಕ್ತಿ ಆರಾಧನೆಗಳು ಹೆಚ್ಚು ಫಲದಾಯಕ ಆಗಲಾರವು. ಅದೇ ರೀತಿ ಪಾಪದ ಭಯದಿಂದ, ನರಕಕ್ಕೆ ಹೋಗಿಬಿಟ್ಟೇವು ಎಂಬ ಅಪಾಯದ ಭೀತಿಯಿಂದ ಕೆಟ್ಟಕೆಲಸ ಮಾಡದಿರುವುದು ಕೂಡ ನಿಜವಾದ ಸಜ್ಜನಿಕೆ ಆಗಲಾರದು. ಭಗವಂತನ ಸನ್ನಿಧಿಯ ಸರಳ ಸಜ್ಜನಿಕೆಯ ಮಂದಿಯೇ ವಿರಾಜಮಾನರು ಆಗುತ್ತಾರೆ. ಸಜ್ಜನರು ಹೆಚ್ಚಾಗಬೇಕಾಗಿದೆ.